# ಅಹಂಕಾರ ತ್ಯಾಗ



✶ ಈ 'ನಾನು' ಎಂಬುದು ಯಾರು ಎಂಬುದನ್ನು ಮೊದಲು ಪತ್ತೆ ಮಾಡಿ ನೋಡು. ಈ 'ನಾನು' ಎಂಬುದು ಎಲುಬೆ, ಮಾಂಸವೆ, ರಕ್ತವೆ ಅಥವಾ ಕರುಳೆ? 'ನಾನು' ಎಂಬುದು ಯಾರು ಎಂಬುದನ್ನು ಪತ್ತೆ ಮಾಡಲು ಹೋಗಿ 'ನೀನು' ಎಂಬುದು ಪತ್ತೆಯಾಗಿ ಬಿಡುತ್ತದೆ. ಅಂದರೆ, ನಮ್ಮ ಆಂತರ್ಯದಲ್ಲಿ ಭಗವಂತನ ಶಕ್ತಿ ಹೊರತು ಇನ್ನು ಬೇರೆ ಏನೂ ಇಲ್ಲ ಅಂತ. 'ನಾನು' ಎಂಬುದು ಇಲ್ಲವೇ ಇಲ್ಲ, ಇರುವವನು ಆತ ಮಾತ್ರವೇ.

✶ ಈ 'ಅಹಂ' ಎಂಬುದು ಒಮ್ಮೆಗೆ ನಮ್ಮನ್ನು ಬಿಟ್ಟು ತೊಲಗಲೊಲ್ಲದು; ಆದ್ದರಿಂದ ಅದು ತೊಲಗದೆ ಉಳಿದುಕೊಂಡಿದ್ದರೆ, ಆ ನೀಚ 'ಅಹಂ' ಭಗವಂತನ ದಾಸನಾಗಿ ಉಳಿದುಕೊಳ್ಳಲಿ. ನಾನು ಭಗವಂತನ ಭಕ್ತ, ಭಗವಂತನ ಮಗು ಅಥವಾ ಭಗವಂತನ ದಾಸ ಎಂಬತಕ್ಕ ಅಹಂಕಾರ ಶ್ರೇಯಸ್ಕರವಾದ್ದು. ಯಾವ 'ಅಹಂ' ಎಂಬುದು ನಮ್ಮನ್ನು ಕಾಮಕಾಂಚನಾಸಕ್ತರನ್ನಾಗಿ ಮಾಡುತ್ತದೆಯೊ, ಅದು ಅಪಕ್ವ 'ಅಹಂ'. ಅದನ್ನು ತ್ಯಾಗಮಾಡಿಬಿಡಬೇಕು.

✶ ಅಹಂಕಾರ, ಉಪಾಧಿ ಇವುಗಳನ್ನೆಲ್ಲಾ ತ್ಯಜಿಸಿದರೇನೇ ಭಗವಂತನ ದರ್ಶನ ಮಾಡಲು ಸಾಧ್ಯ. 'ನಾನು ಪಂಡಿತ', 'ನಾನು ಅಂಥ ದೊಡ್ಡ ಮನುಷ್ಯನ ಮಗ', 'ನಾನು ಧನಿಕ', 'ನಾನು ಅಂಥಾ ಕೀರ್ತಿವಂತ' – ಇವೇ ಮೊದಲಾದ ಉಪಾಧಿಗಳೆಲ್ಲಾ ನಮ್ಮನ್ನು ಬಿಟ್ಟು ತೊಲಗಿದೊಡನೆಯೇ ಭಗವಂತನ ದರ್ಶನ ದೊರೆಯುತ್ತದೆ.

✶ ಅಲೆ ಗಂಗೆಗೆ ಸೇರಿದುದೇ ವಿನಾ, ಎಂದಿಗೂ ಗಂಗೆ ಅಲೆಗೆ ಸೇರಿದುದಲ್ಲ. 'ನಾನು ಒಬ್ಬ ದೊಡ್ಡ ಮನುಷ್ಯ' 'ನಾನು ಅಂಥವನು' ಈ ವಿಧದ ಅಹಂಕಾರಗಳೆಲ್ಲ ಹೋಗದ ಹೊರತು ಭಗವಂತನ ಸಾಕ್ಷಾತ್ಕಾರವನ್ನು ಪಡೆಯಲಾಗುವುದಿಲ್ಲ. 'ಅಹಂ' ಎಂಬ ಗುಡ್ಡವನ್ನು 'ಭಕ್ತಿ' ಎಂಬ ನೀರಿನಿಂದ ನೆನೆಯಿಸಿ ನೆಲಸಮ ಮಾಡಿಬಿಡು.

✶ ವೇದಾಂತದೃಷ್ಟಿಯಿಂದ ಬ್ರಹ್ಮ ಮಾತ್ರವೇ ವಸ್ತು, ಉಳಿದುದೆಲ್ಲಾ ಮಾಯೆ; ಸ್ವಪ್ನವಿದ್ದ ಹಾಗೆ, ಅವಸ್ತು. 'ಅಹಂ' ಎಂಬ ಕೋಲು ಸಚ್ಚಿದಾನಂದಸಾಗರದ ಮಧ್ಯದಲ್ಲಿ ಬಿದ್ದಿದೆ. 'ಅಹಂ' ಎಂಬ ಕೋಲನ್ನು ತೆಗೆದು ಹಾಕಿಬಿಟ್ಟದ್ದೇ ಆದರೆ ಇನ್ನು ಉಳಿದುಕೊಳ್ಳುವುದು ಆ ಅಖಂಡ ಸಚ್ಚಿದಾನಂದ ಸಾಗರ. ಆದರೆ 'ಅಹಂ' ಎಂಬ ಕೋಲು ಅಲ್ಲಿ ಬಿದ್ದಿರುವವರೆಗೆ ಸಾಗರ ಎರಡಾಗಿ ಕಾಣಬರುತ್ತದೆ – ಈ ಕಡೆ ಒಂದು ಭಾಗ, ಆ ಕಡೆ ಒಂದು ಭಾಗ ಇರುವಂತೆ. ಬ್ರಹ್ಮಜ್ಞಾನ ದೊರೆತೊಡನೆಯೇ ಮನುಷ್ಯ ಸಮಾಧಿಸ್ಥನಾಗುತ್ತಾನೆ. ಆಗ ಈ 'ಅಹಂ' ಎಂಬುದು ನಿರ್ನಾಮವಾಗುತ್ತದೆ. ಆದರೆ ಲೋಕಶಿಕ್ಷಣಾರ್ಥವಾಗಿ ಶಂಕರಾಚಾರ್ಯರು 'ವಿದ್ಯಾ ಅಹಂ' ಎಂಬುದನ್ನು ಇಟ್ಟುಕೊಂಡಿದ್ದರು.

✶ ಅನಾಹತ ಧ್ವನಿಯನ್ನು ಹಿಡಿದು ಮುಂದುವರಿದರೆ ಅದರ ಪ್ರತಿಪಾದ್ಯ ಬ್ರಹ್ಮನನ್ನು ಮುಟ್ಟಬಹುದು. ಅದಕ್ಕೇ ಪರಮಪದ ಅಂತ ಹೆಸರು. ಆದರೆ 'ಅಹಂ' ಎಂಬುದು ಇತ್ತು ಎಂದರೆ ಆ ವಿಧದ ಸಾಕ್ಷಾತ್ಕಾರ ಸಾಧ್ಯವಿಲ್ಲ. ಯಾವ ಅವಸ್ಥೆಯಲ್ಲಿ 'ನಾನು', 'ನೀನು' 'ಏಕ', 'ಅನೇಕ' ಯಾವುದೂ ಇರದೋ ಆ ಅವಸ್ಥೆಯಲ್ಲಿ ಬ್ರಹ್ಮ ದರ್ಶನ ದೊರೆಯುತ್ತದೆ.

✶ ಯಾರಿಗೆ ಭಗವಂತನ ದರ್ಶನವಾಗಿರುವುದೊ ಆತನ 'ಅಹಂ' ಹೆಸರಿಗೆ ಮಾತ್ರ ಉಳಿದುಕೊಂಡಿರುತ್ತದೆ. ಆ 'ಅಹಂ' ಮೂಲಕ ಯಾವ ದುಷ್ಟ ಕೆಲಸವನ್ನೂ ಮಾಡಲಾಗುವುದಿಲ್ಲ. ಅದು ಹೆಸರಿಗೆ ಮಾತ್ರ ಇರುತ್ತದೆ – ತೆಂಗಿನ ಮರದ ಮಟ್ಟೆಯ ಮಚ್ಚೆಯ ಹಾಗೆ. ಮಟ್ಟೆ ಬಿದ್ದುಹೋಗಿದೆ–ಈಗ ಕೇವಲ ಮಚ್ಚೆ ಮಾತ್ರ ಇದೆ.

✶ ಜ್ಞಾನಿಯ ಕ್ರೋಧ, ಅಹಂಕಾರ ಕೇವಲ ತೋರಿಕೆಗಳು ಮಾತ್ರ; ಅವು ನಿಜವಾದುವಲ್ಲ.

✶ ನಾನು ಕೇಶವಸೇನನಿಗೆ ಹೇಳಿದೆ: '' 'ಅಹಂ' ಎಂಬುದನ್ನು – ನಾನು ಕರ್ತ, ನಾನು ಲೋಕಶಿಕ್ಷಣ ಕೊಡುತ್ತೇನೆ ಎಂಬ 'ಅಹಂ' ಅನ್ನು–ತ್ಯಾಗಮಾಡಿಬಿಡು.'' ಕೇಶವಸೇನ ಹೇಳಿದ : ''ಮಹಾಶಯರೆ, ಹಾಗಾದರೆ ಸಮಾಜ ಏನೂ ಉಳಿಯದು.'' ಅದಕ್ಕೆ ನಾನು ಉತ್ತರವಿತ್ತೆ: '' 'ದುಷ್ಟ ಅಹಂ' ಅನ್ನು ತ್ಯಜಿಸಿಬಿಡು. ನಾನು ಭಗವಂತನ ದಾಸ, ನಾನು ಭಗವಂತನ ಭಕ್ತ ಎಂಬ 'ಅಹಂ' ಅನ್ನು ತ್ಯಜಿಸಬೇಕಾಗಿಲ್ಲ. 'ದುಷ್ಟ ಅಹಂ' ನಮ್ಮಲ್ಲಿ ಇರುವುದರಿಂದ 'ಭಗವಂತನ ಅಹಂ' ಎಂದೂ ನಮ್ಮಲ್ಲಿ ನೆಲೆಸದು. ಉಗ್ರಾಣವನ್ನು ಒಬ್ಬ ನೋಡಿಕೊಳ್ಳುತ್ತಾ ಇದ್ದರೆ, ಮನೆ ಯಜಮಾನ ಆ ಕಡೆಗೆ ಸುಳಿಯುವುದೇ ಇಲ್ಲ.''

**'ಶ್ರೀರಾಮಕೃಷ್ಣ ವಚನವೇದ'**ದಿಂದ